بسم اللهِ الرّحمٰنِ الرّحيم



# ವಾಗ್ದತ್ತ ಮಸೀಹರ ಆಗಮನದ ಬಗ್ಗೆ ಹಝ್ರತ್ ಮುಹಮ್ಮದ್ ರಸೂಲರು ﷺ ಭವಿಷ್ಯ ನುಡಿದ ದೃಷ್ಟಾಂತಗಳಲ್ಲಿ ಅತ್ಯಂತ ಬಲವತ್ತಾದುದು ಸೂರ್ಯ ಚಂದ್ರ ಗ್ರಹಣಗಳ ದೃಷ್ಟಾಂತವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **20-03-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ಇಲ್ಲಿ ಸೂರ್ಯಗ್ರಹಣ ಸಂಭವಿಸಿದೆ. ಇದೇ ರೀತಿ ಬೇರೆ ಕೆಲವು ದೇಶಗಳಲ್ಲೂ ಸೂರ್ಯಗ್ರಹಣ ಸಂಭವಿಸಿದೆ. ಗ್ರಹಣದ ಸಂದರ್ಭದಲ್ಲಿ ಪ್ರಾರ್ಥಿಸಲು, ಇಸ್ತಿಗ್‌ಫಾರ್ ಮಾಡಲು, ದಾನಧರ್ಮ ನೀಡಲು ಮತ್ತು ನಮಾಝ್ ಮಾಡಲು ಹಝ್ರತ್ ಮುಹಮ್ಮದ್ ರಸೂಲ್ ﷺ ಉಪದೇಶಿಸಿದ್ದಾರೆ. ಗ್ರಹಣ ಎಲ್ಲೆಲ್ಲಿ ಸಂಭವಿಸಲಿದೆಯೋ ಅಲ್ಲೆಲ್ಲ **ನಮಾಝೇ ಕುಸೂಫ್** (ಗ್ರಹಣ ನಮಾಝ್) ಅನುಷ್ಠಿಸಬೇಕೆಂದು ಸೂಚಿಸಲಾಗಿತ್ತು. ನಾವು ಇಲ್ಲಿ ಹಝ್ರತ್ ಮುಹಮ್ಮದ್ ರಸೂಲರ ﷺ ಆಜ್ಞೆ ಪ್ರಕಾರ **ನಮಾಝೇ ಕುಸೂಫ್** ಅನುಷ್ಠಿಸಿದೆವು. ಅಲ್ಲಾಹನ ದೃಷ್ಟಾಂತಗಳಲ್ಲಿ ವಿಶಿಷ್ಟವಾದುದು ಸೂರ್ಯ ಮತ್ತು ಚಂದ್ರ ಗ್ರಹಣದ ದೃಷ್ಟಾಂತವಾಗಿದೆ ಎಂದು ಹದೀಸುಗಳಲ್ಲಿ ಉಲ್ಲೇಖಿತವಾಗಿದೆ. ವಾಗ್ದತ್ತ ಮಸೀಹರ ಆಗಮನದ ಬಗ್ಗೆ ಹಝ್ರತ್ ಮುಹಮ್ಮದ್ ರಸೂಲರು ﷺ ಭವಿಷ್ಯ ನುಡಿದ ದೃಷ್ಟಾಂತಗಳಲ್ಲಿ ಅತ್ಯಂತ ಬಲವತ್ತಾದುದು ಸೂರ್ಯ ಚಂದ್ರ ಗ್ರಹಣಗಳ ದೃಷ್ಟಾಂತವಾಗಿದೆ. ಅಲ್ಲಾಹನ ಅನುಗ್ರಹದಿಂದ ಪೂರ್ವದಲ್ಲೂ ಪಶ್ಚಿಮದಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೆಂಬಲವಾಗಿ ಈ ದೃಷ್ಟಾಂತ ಈಡೇರಿತು. ಹೀಗೆ ಗ್ರಹಣದ ದೃಷ್ಟಾಂತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮತ್ತು ಜಮಾಅತ್‌ನೊಂದಿಗೆ ವಿಶಿಷ್ಟ ಸಂಬಂಧ ಹೊಂದಿದೆ.

ಇಂದು ಇಲ್ಲಿ ಸಂಭವಿಸಿದ ಗ್ರಹಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಒಂದು ದೃಷ್ಟಾಂತವೆಂದು ಹೇಳಲಿಕ್ಕೆ ಆಗುವುದಿಲ್ಲವಾದರೂ ಅಲ್ಲಾಹನ ದೃಷ್ಟಾಂತಗಳಲ್ಲಿ ಒಂದಾಗಿದೆ. ಈ ಗ್ರಹಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಚಿಹ್ನೆಯಾಗಿ ಸಂಭವಿಸಿದ ಗ್ರಹಣದ ಬಗ್ಗೆ ಖಂಡಿತವಾಗಿಯೂ ಗಮನ ಹರಿಸುತ್ತದೆ. ಇಂದು ಸಂಭವಿಸಿದ ಗ್ರಹಣ ಮಹ್‌ದಿಯ ಚಿಹ್ನೆಯಾಗಿ ಸಂಭವಿಸಿದ ಆ ಗ್ರಹಣದ ಕಡೆಗೆ ವಿಶಿಷ್ಟವಾಗಿ ಸೂಚಿಸುತ್ತದೆ. ಏಕೆಂದರೆ ಈ ದಿನ ಜುಮುಅದ ದಿನವಾಗಿದೆ. ಜುಮುಅ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದೊಂದಿಗೆ ವಿಶೇಷ ಸಂಬಂಧ ಹೊಂದಿದೆ. ಅಲ್ಲದೆ ಇದು ಮಾರ್ಚ್ ತಿಂಗಳಾಗಿದೆ. ಮೂರು ದಿನಗಳ ನಂತರ, ಎಂದರೆ ಮಾರ್ಚ್ ದಿನಾಂಕ 23ರಂದು **ಯೌಮೇ ಮಸೀಹ್ ಮೌಊದ್** ಆಗಿದೆ. ಈ ತಿಂಗಳು, ಈ ದಿನ, ಈ ಗ್ರಹಣ ವಿವಿಧ ರೀತಿಗಳಲ್ಲಿ ಜಮಾಅತಿನ ಚರಿತ್ರೆಯನ್ನು ನೆನಪಿಸುವವುಗಳಾಗಿವೆ. ನಾನು **ನಮಾಝೆ ಕುಸೂಫ್ ಖುತ್‌ಬ** ನೀಡಲು ಉಲ್ಲೇಖಗಳನ್ನು ಆಯ್ಕೆ ಮಾಡಿದಾಗ ಜುಮುಅ ಖುತ್‌ಬದಲ್ಲೂ ಗ್ರಹಣದ ಬಗ್ಗೆ ಪ್ರಸ್ತಾಪಿಸಲು ಯೋಚಿಸಿದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಸೂರ್ಯ ಚಂದ್ರ ಗ್ರಹಣದ ಭವಿಷ್ಯವಾಣಿ ಹಝ್ರತ್ ಮುಹಮ್ಮದ್ ರಸೂಲರು ﷺ ನುಡಿದ ಭವಿಷ್ಯವಾಣಿಯಾಗಿತ್ತು. ಆ ಗ್ರಹಣ ನೋಡಿದ ನಂತರ ಜಮಾಅತ್‌ಗೆ ಸೇರಿದ ಕೆಲವು ಸಹಾಬಿಗಳಿಗೆ ಸಂಬಂಧಿಸಿದ ಘಟನೆಗಳನ್ನು ಸಹ ವಿವರಿಸಲು ನಾನು ಬಯಸಿದೆನು. ಹಝ್ರತ್ ಮುಹಮ್ಮದ್ ರಸೂಲರ ﷺ ಜೀವಿತ ಕಾಲದಲ್ಲಿ ಒಂದು ಸೂರ್ಯ ಗ್ರಹಣ ಸಂಭವಿಸಿತ್ತು. ಅದಕ್ಕೆ ಸಂಬಂಧಿಸಿ ಒಂದು ಹದೀಸು ಹೀಗಿದೆ:

ಹಝ್ರತ್ ಅಸ್‌ಮಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಸೂರ್ಯ ಗ್ರಹಣ ಸಂಭವಿಸಿದಾಗ ನಾನು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರವರ ಮನೆಗೆ ಹೋದಾಗ ಅವರು ನಮಾಝ್ ಮಾಡುತ್ತಿದ್ದರು. ನಾನು ಹೇಳಿದೆ: ಜನರಿಗೇನಾಗಿದೆ, ಈಗ ನಮಾಝ್ ಮಾಡುತ್ತಿದ್ದಾರೆ. ಹಝ್ರತ್ ಆಯಿಶಾ ಆಕಾಶದ ಕಡೆಗೆ ಕೈ ತೋರಿಸಿ **"ಸುಬ್‌ಹಾನಲ್ಲಾಹ್"** ಎಂದು ಹೇಳಿದರು. ನಾನು ಕೇಳಿದೆ: ಯಾವುದಾದರೂ ದೃಷ್ಟಾಂತ ಇದಾಗಿದೆಯೋ? ಅವರು ತಲೆ ಅಲ್ಲಾಡಿಸಿ ಹೌದೆಂದು ಸೂಚಿಸಿದರು. ಅವರು ಹೇಳಿದರು: ಅಲ್ಲಾಹನ ವಿಶಿಷ್ಟ ದೃಷ್ಟಾಂತಗಳಲ್ಲಿ ಇದು ಒಂದಾಗಿದೆ. ಆದರೆ ಯಾರದಾದರೂ ಜೀವಿತ ಮತ್ತು ಮರಣದೊಂದಿಗೆ ಇದಕ್ಕೆ ಸಂಬಂಧವಿಲ್ಲ. ಇದರಲ್ಲಿ ದುಆ ಮಾಡಬೇಕು; ಇಸ್ತಿಗ್‌ಫಾರ್ ಮಾಡಬೇಕು.

ಸೂರ್ಯ-ಚಂದ್ರ ಗ್ರಹಣ ಸಂಭವಿಸಿದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: "ನನಗೆ ಬಹಳ ಆಶ್ಚರ್ಯವಾಗುತ್ತದೆ- ದೃಷ್ಟಾಂತಗಳ ನಂತರ ದೃಷ್ಟಾಂತಗಳು ಪ್ರಕಟಗೊಳ್ಳುತ್ತಾ ಇವೆ. ಆದರೆ ಸತ್ಯವನ್ನು ಅಂಗೀಕರಿಸುವ ಬಗ್ಗೆ ಮೌಲವಿಗಳಿಗೆ ಶ್ರದ್ಧೆ ಇಲ್ಲ. ಅಲ್ಲಾಹನು ಎಲ್ಲ ಕ್ಷೇತ್ರಗಳಲ್ಲೂ ಅವರನ್ನು ಸೋಲಿಸುತ್ತಿದ್ದಾನೆಂದು ಅವರು ಕಾಣುವುದಿಲ್ಲ. ಅವರಿಗೆ ಯಾವುದಾದರೂ ರೀತಿಯಲ್ಲಿ ಅಲ್ಲಾಹನ ಸಹಾಯ ಪ್ರಕಟವಾಗಲಿ ಎಂದು ಅವರು ಬಹಳ ಬಯಸುತ್ತಾರೆ. ಆದರೆ ಅವರಿಗೆ ದಿನಂಪ್ರತಿ ನಿರಾಶೆ ಸಂಭವಿಸುತ್ತಿದೆ. ಅವರ ದುರದೃಷ್ಟತೆ ಮತ್ತು ಪರಾಜಯ ಸಾಬೀತಾಗುತ್ತಿದೆ. ಮಹ್‌ದಿ ಎಂದು ವಾದಿಸಿದ ವ್ಯಕ್ತಿಯ ಕಾಲದಲ್ಲಿ ಈ ಭವಿಷ್ಯವಾಣಿ ಈಡೇರಿದುದರಿಂದ ಭವಿಷ್ಯ ನುಡಿ ಸತ್ಯವೆಂದು ಸಾಬೀತಾಗುತ್ತದೆ. ಆದರೆ ಈ ಮೌಲವಿಗಳು ಪಾಠ ಕಲಿಯುವುದಿಲ್ಲ. ಆಕಾಶ ಅವರಿಗೆ ವಿರುದ್ಧವಾಗಿದೆ. ಭೂಮಿಯ ಸ್ಥಿತಿ ಸಹ ಅವರಿಗೆ ವಿರುದ್ಧವಾಗಿದೆ. ಆಕಾಶ ಅವರಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿದೆ. ಭೂಮಿಯಲ್ಲಿ ಶಿಲುಬೆಯ ಪ್ರಾಬಲ್ಯ ಅವರ ವಿರುದ್ಧ ಸಾಕ್ಷ್ಯ ನೀಡುತ್ತದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ನಮಗೆ ಬೆಂಬಲವಾಗಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದಾಗ ನೂರುಗಟ್ಟಲೆ ಜನರು ಅವುಗಳನ್ನು ನೋಡಿ ನಮ್ಮ ಜಮಾಅತಿಗೆ ಸೇರಿದರು. ಸೂರ್ಯ ಚಂದ್ರ ಗ್ರಹಣಗಳಿಂದ ನಮಗೆ ಸಂತೋಷ ಲಭಿಸಿತು. ಶತ್ರುಗಳಿಗೆ ಹೀನಾಯ ಸ್ಥಿತಿ ಉಂಟಾಯಿತು. ನಾವು ವಾಗ್ದತ್ತ

ಮಹ್‌ದಿಯ ವಾದ ಮಾಡಿದಾಗ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಲಿ ಎಂದು ಅವರು ಆಶಿಸಿದ್ದರು ಎಂದು ಈ ಜನರು ಪ್ರಮಾಣ ಮಾಡಿ ಹೇಳ ಬಲ್ಲರೇ?

ಈ ಗ್ರಹಣ ಅರಬ್ ದೇಶದಲ್ಲಿ ಸಂಭವಿಸಲಿಲ್ಲ. ಅದರ ಯಾವ ಚಿಹ್ನೆಯೂ ಅಲ್ಲಿ ಕಾಣಿಸಲಿಲ್ಲ. ಈ ಮೌಲವಿಗಳ ಇಚ್ಛೆಗೆ ವಿರುದ್ಧವಾಗಿ ಈ ಗ್ರಹಣಗಳು ಸಂಭವಿಸಿದಾಗ ಅವರ ಹೃದಯಗಳು ನಿಸ್ಸಂಶಯವಾಗಿ ನೊಂದು ಕೊಂಡಿರಬಹುದು. ಅವರು ತಮ್ಮ ಹೀನ ಸ್ಥಿತಿಯನ್ನು ಕಂಡಿರಬಹುದು.''

ಇನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಸಹಾಬಿಗಳಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುತ್ತೇನೆ.

ಹಝ್ರತ್ ಗುಲಾಮ್ ಮುಹಮ್ಮದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ''ನಮ್ಮ ಊರಿನಲ್ಲಿ ಮೌಲವಿ ಬದ್ರುದ್ದೀನ್ ಎಂಬವರೊಂದಿಗೆ ನಾನು ನಿಂತುಕೊಂಡು ಸೂರ್ಯಗ್ರಹಣವನ್ನು ನೋಡಿದಾಗ ಮೌಲವಿ ಸಾಹೇಬರು ಹೇಳಿದರು: **ಸುಬ್‌ಹಾನಲ್ಲಾಹ್,** ಮಹ್‌ದಿ ಆಗಮಿಸುವ ಚಿಹ್ನೆ ಈಡೇರಿದೆ. ಅವರು ಆಗಮಿಸುವ ಕಾಲ ಇದಾಗಿದೆ. ಸ್ವಲ್ಪ ಕಾಲದನಂತರ ಮೌಲವಿ ಸಾಹೇಬರು ಅಹ್ಮದಿ ಆದರು. ಅವರು ಬಹಳ ಸದ್ಗುಣಿ ಮತ್ತು ನಿಷ್ಠಾವಂತರಾಗಿದ್ದರು. ಒಂದು ವರ್ಷಕಾಲ ಉಪದೇಶಿಸಿ ಅವರು ತನ್ನ ತಂದೆ ತಾಯಂದಿರನ್ನೂ ಪತ್ನಿಯನ್ನೂ ಅಹ್ಮದಿಯರನ್ನಾಗಿ ಮಾಡಿದರು.

ಹಾಫಿಝ್ ಮುಹಮ್ಮದ್ ಹಯಾತ್ ಎಂಬವರು **''ಲಾಲಿಯಾನ್ ಮೇಂ ಅಹ್ಮದಿಯ್ಯತ್''** ಎಂಬ ಶೀರ್ಷಿಕೆಯಲ್ಲಿ ಬರೆದ ಒಂದು ಲೇಖನ ಹೀಗಿದೆ: ''1894ರಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದಾಗ ಇಮಾಮ್ ಮಹ್‌ದಿಯ ಬಗ್ಗೆ ಮತ್ತು ಖಿಯಾಮತ್ ಬಗ್ಗೆ ಚಿಂತೆಗಳು ತಲೆದೋರಿದುವು. ಆ ಕಾಲಘಟ್ಟದಲ್ಲಿ ಈ ಚಿಹ್ನೆಗಳ ಬಗ್ಗೆ ಬಹಳ ಹೆಚ್ಚು ಪ್ರಸ್ತಾಪಿಸಲಾಗುತ್ತಿತ್ತು. ಹಾಫಿಝ್ ಮುಹಮ್ಮದ್ ಲಖೋಖೆ ತಮ್ಮ ಗ್ರಂಥ **ಅಹ್‌ವಾಲುಲ್ ಆಖಿರತ್**ನಲ್ಲಿ ಇಮಾಮ್ ಮಹ್‌ದಿಯ ಆಗಮನದ ಚಿಹ್ನೆಯಾಗಿ ಸೂರ್ಯ ಚಂದ್ರ ಗ್ರಹಣದ ಬಗ್ಗೆ ಪಂಜಾಬಿ ಭಾಷೆಯಲ್ಲಿ ಪ್ರಸ್ತಾಪಿಸಿದ್ದರು. ಇದೇ ರೀತಿ ಲಾಲಿಯಾನಿನ ದರ್ಗಾದ ಮೇಲ್ವಿಚಾರಕ ಸೂಫೀ ಕವಿ ಮಿಯಾನ್ ಮುಹಮ್ಮದ್ ಸಿದ್ದೀಖ್ ಲಾಲಿ ಎಂಬವರು ಈ ದೃಷ್ಟಾಂತಗಳ ಬಗ್ಗೆ ಪದ್ಯ ಬರೆದಿದ್ದರು.

ಈ ದೃಷ್ಟಾಂತಗಳ ಬಗ್ಗೆ ಮನೆಮನೆಗಳಲ್ಲಿ ಚರ್ಚೆ ನಡೆಯುತ್ತಿದ್ದುವು. ಜನರು ಈ ಕಾಲಘಟ್ಟದ ಇಮಾಮರನ್ನು ಹುಡುಕುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಮೌಲಾನ ತಾಜ್ ಮಹ್‌ಮೂದ್ ಮತ್ತು ಬೇರೆ ಕೆಲವರು ಪರಸ್ಪರ ಸಮಾಲೋಚಿಸಿ ಒಂದು ಪ್ರತಿನಿಧಿ ಸಂಘ ಖಾದಿಯಾನಿಗೆ ಹೋಗಿ ಹಝ್ರತ್ ಮಹ್‌ದಿ ಅಲೈಹಿಸ್ಸಲಾಮರನ್ನು ಕಂಡು, ಹದೀಸುಗಳಲ್ಲಿ ಪ್ರಸ್ತಾಪಿಸಲಾದ ಚಿಹ್ನೆಗಳು ಅವರಲ್ಲಿ ಈಡೇರಿವೆಯೋ ಎಂದು ಪರಿಶೀಲಿಸಿ ಅವು ಈಡೇರಿದ್ದರೆ ಬೈಅತ್ ಮಾಡಲು ನಿರ್ಧರಿಸಿದರು. ಹೀಗೆ ಹೊರಟವರಲ್ಲಿ ಮೂರು ಮುಖ್ಯ ವ್ಯಕ್ತಿಗಳು ಶೇಖ್ ಅಮೀರುದ್ದೀನ್, ಮಿಯಾಂ ಸಾಹಿಬ್‌ದೀನ್, ಮತ್ತು ಮಿಯಾಂ ಮುಹಮ್ಮದ್ ಯಾರ್ ಆಗಿದ್ದರು. ಈ ಜನರು ನಡೆದುಕೊಂಡೇ ಖಾದಿಯಾನ್ ಕಡೆಗೆ ಸಂಚರಿಸಿದರು. ಬಟಾಲದ ಸಮೀಪ ತಲಪಿದಾಗ ಮೌಲವಿ ಮುಹಮ್ಮದ್ ಹುಸೈನರ ಶಿಷ್ಯರನ್ನು ಕಂಡಾಗ ಅವರೊಂದಿಗೆ ಖಾದಿಯಾನಿಗೆ ಹೋಗುವ ದಾರಿ ಕೇಳಿದರು. ಅವರು ಖಾದಿಯಾನಿಗೆ ಹೋಗುವ ಕಾರಣ ಕೇಳಿದರು. ಉದ್ದೇಶವೇನೆಂದು ತಿಳಿದಾಗ, ಮೌಲವಿ ಬಟಾಲವಿಯ ಶಿಷ್ಯರು ಹೇಳಿದರು: ನೀವು ಖಾದಿಯಾನಿಗೆ ಹೋಗಬೇಡಿರಿ. ಮಹ್‌ದಿ ಎಂದು ವಾದಿಸಿದ ವ್ಯಕ್ತಿ ಸುಳ್ಳುಗಾರ.

ಆದರೆ ಆ ಜನರು ಖಾದಿಯಾನಿಗೆ ಹೋದರು. ಖಾದಿಯಾನ್ ತಲಪಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಸ್‌ಜಿದ್ ಮುಬಾರಕ್‌ನಲ್ಲಿದ್ದರು. ಅವರು ಜನರ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾ ಇದ್ದರು. ಅದರೊಂದಿಗೆ ಗ್ರಂಥ ರಚನೆಯನ್ನು ಮಾಡುತ್ತಾ ಇದ್ದರು. ಇದು ಸಹ ಒಂದು ದೃಷ್ಟಾಂತವಾಗಿತ್ತು. ಅವರು ಹೇಗೆ ಲೇಖನಿ ಚಲಾಯಿಸುತ್ತಿದ್ದರೆಂದರೆ, ಅದೃಶ್ಯವಾಗಿ ಯಾರೋ ಅವರ ಹೃದಯಕ್ಕೆ ವಿಷಯಗಳನ್ನು ಇಳಿಸುತ್ತಿದ್ದಂತೆ ಕಾಣುತ್ತಿತ್ತು. ಅದರೊಂದಿಗೆ ಅವರು ಜನರ ಮಧ್ಯೆ ಕುಳಿತು ಮಾತನಾಡುತ್ತಿದ್ದರು. ಅವರ ಲೇಖನಕ್ಕೆ ತಡೆಯುಂಟಾಗುತ್ತಿರಲಿಲ್ಲ.

ಮೂರು ದಿನಗಳ ಕಾಲ ಈ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದ್ದರು. ಅವರ ಜೊತೆ ನಡೆಯಲು ಸಹ ಹೋಗುತ್ತಿದ್ದರು. ಲಾಲಿಯಾನಿನ ಮೌಲವಿಗಳು ವಿವರಿಸಿದ ಚಿಹ್ನೆಗಳನ್ನು ಸಹ ಪರಿಶೀಲಿಸುತ್ತಿದ್ದರು. ಅವರು ಆ ಚಿಹ್ನೆಗಳು ಈಡೇರಿದುದಾಗಿ ತಮ್ಮ ಕಣ್ಣುಗಳಿಂದ ಸ್ವತಃ ಕಂಡರು. ಕೊನೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ, ಹಝ್ರತ್ ಮುಹಮ್ಮದ್ ರಸೂಲರು ﷺ ತಲಪಿಸಬೇಕೆಂದು ಹೇಳಿದ ಸಲಾಮನ್ನು ತಲಪಿಸಿ ಹೇಳಿದರು ನಮ್ಮ ಬೈಅತ್ ಸ್ವೀಕರಿಸಿರಿ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇನ್ನೂ ಕೆಲವು ದಿನ ನಮ್ಮ ಜೊತೆಗಿರಿ. ಆ ಮಾತನ್ನು ಆಲಿಸಿ ಶೇಖ್ ಸಾಹೇಬರು ಕಣ್ಣೀರು ಸುರಿಸಿ ತಮ್ಮ ಪಾದಗಳನ್ನು ತೋರಿಸಿ ಹೇಳಿದರು: ನಾವು ದೀರ್ಘ ದೂರದಿಂದ ನಡೆದುಕೊಂಡು ಬಂದಿದ್ದೇವೆ. ನಮ್ಮ ಪಾದಗಳು ಬಾತುಕೊಂಡಿವೆ. ನಾವು ಇಷ್ಟೆಲ್ಲಾ ಕಷ್ಟಪಟ್ಟು ಇಲ್ಲಿಗೆ ಬಂದಿದ್ದೇವೆ. ನಿಮ್ಮನ್ನು ಸತ್ಯಸಂಧ ಮಹ್‌ದಿ ಎಂದು ಗುರುತಿಸಿದ್ದೇವೆ. ನಾವೆಷ್ಟು ಕಾಲ ಜೀವಿಸಿರುವೆವು ಎಂದು ತಿಳಿಯದು. ತಾವು ನಮ್ಮ ಬೈಅತ್ ಸ್ವೀಕರಿಸಿರಿ. ಅನಂತರ ಮಸ್ಜಿದ್ ಮುಬಾರಕ್‌ನಲ್ಲಿ ಅವರೆಲ್ಲರೂ ಬೈಅತ್ ಮಾಡಿದರು.

ಅಸದುಲ್ಲಾ ಖುರೈಶಿ ಎಂಬವರು ಹಝ್ರತ್ ಖಾಝೀ ಅಕ್‌ಬರ್ ಸಾಹೇಬರ ಬಗ್ಗೆ ಹೀಗೆ ಬರೆಯುತ್ತಾರೆ: ಖಾಝೀ ಸಾಹೇಬರು ಅಹ್ಮದಿಯರಾಗುವ ಮೊದಲು ಅಹ್ಲೆ ಹದೀಸ್ ಪಂಗಡದವರಾಗಿದ್ದರು. ಮೌಲವಿ ಬುರ್‌ಹಾನುದ್ದೀನ್ ಜಿಹ್‌ಲಮೀಯವರ ಜೊತೆ ಅವರಿಗೆ ಸಂಪರ್ಕವಿತ್ತು. ಖಾಝೀ ಸಾಹೇಬರು ತಮ್ಮ ಪ್ರದೇಶದ ಇಮಾಮರಾಗಿದ್ದರು. ಅವರು ಜನರಿಗೆ ಧಾರ್ಮಿಕ ವಿದ್ಯಾಭ್ಯಾಸ ನೀಡುತ್ತಿದ್ದರು. ಸೂರ್ಯ ಚಂದ್ರ ಗ್ರಹಣಗಳು ಮಹ್‌ದಿಯ ದೃಷ್ಟಾಂತಗಳೆಂದು ಅವರಿಗೆ ತಿಳಿದಿತ್ತು. ಈ ಗ್ರಹಣಗಳು ರಮ್‌ಝಾನ್ ತಿಂಗಳಲ್ಲಿ ಸಂಭವಿಸಿದಾಗ ಖಾಝೀ ಸಾಹೇಬರು ಹೇಳಿದರು: ''ಇಮಾಮ್ ಮಹ್‌ದಿಯ ಆಗಮನದ ದೃಷ್ಟಾಂತ ಈಡೇರಿದೆ. ಆದುದರಿಂದ ನಾವು ಮಹ್‌ದಿ ಯಾರೆಂದು ಹುಡುಕಬೇಕು.'' ಆ ಕಾಲದಲ್ಲಿ ಖಾಝೀ ಸಾಹೇಬರಿದ್ದ ಚಾರ್‌ಕೋಟಿನ ಜನರು ಸರಕು ಸಾಮಾಗ್ರಿ ಖರೀದಿಸಲು ಜಿಹಲಮಿಗೆ ಹೋಗುತ್ತಾ ಇದ್ದರು. ಖಾಝೀ ಸಾಹೇಬರು ಜಿಹಲಮಿಗೆ ಹೋಗುವವರೊಂದಿಗೆ ಹೇಳಿದರು: ಮೌಲವಿ ಬುರ್‌ಹಾನುದ್ದೀನರನ್ನು ಕಂಡು ಅವರಿಂದ ಮಾರ್ಗದರ್ಶನ ಪಡೆಯಿರಿ ಎಂದು. ಮೌಲವಿ ಸಾಹೇಬರು ಒಂದು ಪತ್ರ ಮತ್ತು ಕೆಲವು ಪುಸ್ತಕಗಳನ್ನು ಖಾಝೀ ಸಾಹೇಬರಿಗೆ ಕಳುಹಿಸಿದರು. ಆದರೆ ಈ ಪುಸ್ತಕ ತಲಪುವ ಮೊದಲು ಖಾಝೀ

ಸಾಹೇಬರು ಒಂದು ಸ್ವಪ್ನ ಕಂಡರು. ಯಾರೋ ಮೂರು ಪುಸ್ತಕ ಅವರಿಗೆ ಸ್ವಪ್ನದಲ್ಲಿ ಕೊಟ್ಟರು. ಒಂದು ಪುಸ್ತಕ ಓದಲು ಎತ್ತಿದಾಗ ಅದರಲ್ಲಿ ಕೊಳಕು ತುಂಬಿತ್ತು. ದುರ್ವಾಸನೆ ಸೂಸುತ್ತಿತ್ತು. ಆಗ ಆ ಪುಸ್ತಕವನ್ನು ಅವರು ದೂರಕ್ಕೆಸೆದರು. ಉಳಿದ ಎರಡು ಪುಸ್ತಕಗಳಿಂದ ಪ್ರಕಾಶದ ಕಿರಣಗಳು ಹೊರಗೆ ಬರುತ್ತಿದ್ದುವು.

ಮೌಲವಿ ಸಾಹೇಬರು ಕಳುಹಿಸಿದ ಪುಸ್ತಕಗಳಲ್ಲಿ ಒಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಬರೆದುದಾಗಿತ್ತು. ಅದರಲ್ಲಿ ನಿಂದನೆಗಳು ತುಂಬಿದ್ದುವು. ಖಾಝೀ ಸಾಹೇಬರು ಆ ಪುಸ್ತಕ ಓದುವುದನ್ನು ನಿಲ್ಲಿಸಿ ಎಸೆದರು. ಉಳಿದ ಎರಡು ಪುಸ್ತಕಗಳನ್ನು ಮತ್ತು ಪತ್ರ ಓದಿದಾಗ ಅವುಗಳು ತನ್ನ ಸ್ವಪ್ನ ಪ್ರಕಾರವಾಗಿವೆ ಎಂದು ಕಂಡರು. ಅವರು ಮೂವರನ್ನು ಖಾದಿಯಾನಿಗೆ ಕಳುಹಿಸಿದರು. ಅವರು ಬಟಾಲಕ್ಕೆ ತಲಪಿದಾಗ ಮೌಲವಿ ಮುಹಮ್ಮದ್ ಹುಸೈನ್ ಅವರನ್ನು ತಡೆದರೂ ಅವರು ಖಾದಿಯಾನಿಗೆ ಹೋದರು. ಅವರು ಅಲ್ಲಿ ಬೈಅತ್ ಮಾಡಿ ಹಿಂದಿರುಗಿದರು. ಖಾಝೀ ಸಾಹೇಬರು ಪತ್ರ ಬರೆದು ಬೈಅತ್ ಮಾಡಿದರು. ಅನಂತರ ಸ್ವತಃ ಹಾಜರಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಬೈಅತ್ ಮಾಡಿದರು.

ಹಝ್ರತ್ ಮೌಲಾನ ಅಬುಲ್ ಅತಾ ಸಾಹೇಬ್ ಜಾಲಂಧರಿ ಅವರ ಅಜ್ಜ ಖಾಝೀ ಮೌಲಾ ಭಕ್ಷ್ ಜಾಲಂಧರ್ ಜಿಲ್ಲೆಯ ಪ್ರಸಿದ್ಧ ಅಹ್ಲೇ ಹದೀಸ್ ಖತೀಬ್ ಆಗಿದ್ದರು. ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದಾಗ ಅವರು ಅದರ ಬಗ್ಗೆ ವಿವರಿಸಿ ಇಮಾಮ್ ಮಹ್‌ದಿಯ ಆಗಮನದ ಚಿಹ್ನೆಗಳು ಪ್ರಕಟವಾದುವು. ಇಮಾಮ್ ಮಹ್‌ದಿ ಎಲ್ಲಿ ಯಾವಾಗ ಪ್ರಕಟವಾಗುವರು ಎಂದು ನೋಡಬೇಕಾಗಿದೆ ಎಂದು ತನ್ನ ಶುಕ್ರವಾರದ ಖುತ್‌ಬದಲ್ಲಿ ಹೇಳಿದರು. ಈ ಖುತ್‌ಬ ಹಲವು ಜನರಿಗೆ ಪ್ರಭಾವ ಬೀರಿತು. ಖಾಝೀ ಮೌಲಾ ಭಕ್ಷ್ ಸ್ವತಃ ಬೈಅತ್ ಮಾಡದಿದ್ದರೂ ಅವರ ಹಿರಿಯ ಪುತ್ರ ಮಿಯಾಂ ಇಮಾಮುದ್ದೀನ್ ಸಾಹೇಬರು ಬೈಅತ್ ಮಾಡಿದ್ದರು. ಮಿಯಾಂ ಇಮಾಮುದ್ದೀನ್ ಸಾಹೇಬರು ಹಝ್ರತ್ ಮೌಲಾನ ಅಬುಲ್ ಅತಾ ಸಾಹೇಬ್ ಜಾಲಂಧರಿಯವರ ಪಿತರಾಗಿದ್ದರು.

ಸಯ್ಯಿದ್ ನಝೀರ್ ಹುಸೈನ್ ಶಾ ಸಾಹೇಬ್ ಹೇಳುತ್ತಾರೆ: ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದಾಗ ನಾನು ಮನೆಯಲ್ಲಿದ್ದೆ ನನ್ನ ತಂದೆಯವರು ಹೀಗೆ ಹೇಳುತ್ತಿದ್ದರು: "ಇವು ಹಝ್ರತ್ ಮಿರ್ಝಾ ಸಾಹೇಬರ ಸತ್ಯತೆಗೆ ಚಿಹ್ನೆಗಳಾಗಿವೆ." ಈ ಮಾತುಗಳು ನನ್ನ ಮೇಲೆ ಪ್ರಭಾವ ಬೀರಿದುವು. ನನಗೆ ಬೈಅತ್ ಮಾಡುವ ಭಾಗ್ಯ ಲಭಿಸಿತು.

ಸಯ್ಯಿದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾ ಸಾಹೇಬ್ ಹೇಳುತ್ತಾರೆ: ಆ ಕಾಲದಲ್ಲಿ ಸಾಮಾನ್ಯವಾಗಿ ಮುಸ್ಲಿಮರ ಅವನತಿಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಹಿಜರಿ ಹದಿಮೂರನೆಯ ಶತಮಾನದ ಅಂತ್ಯದಲ್ಲಿ ಇಮಾಮ್ ಮಹ್‌ದೀ ಆಗಮಿಸುವರು. ಅನಂತರ ಹಝ್ರತ್ ಈಸಾ ಅಲೈಹಿಸ್ಸಲಾಮ್ ಸಹ ಆಗಮಿಸುವರು ಎಂದೆಲ್ಲಾ ಚರ್ಚೆ ನಡೆಯುತ್ತಿತ್ತು. ನನ್ನ ತಾಯಿ ಮಹ್‌ದಿ ಮತ್ತು ಮಸೀಹರ ಆಗಮನದ ಬಗ್ಗೆ ಬಹಳ ಸಂತೋಷದಿಂದ ವಿವರಿಸುತ್ತಿದ್ದರು. ಅವರು ಆಗಮಿಸುವ ಕಾಲ ಸಮೀಪಿಸಿದೆ ಎಂದು ಹೇಳುತ್ತಿದ್ದರು. ಸೂರ್ಯ ಚಂದ್ರ ಗ್ರಹಣಗಳು ಹಝ್ರತ್ ಮಹ್‌ದಿಯ ಆಗಮನದ ಕುರುಹುಗಳೆಂದು ಹೇಳುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ನಮ್ಮ ಕುಟುಂಬದ ಎಲ್ಲರೂ ಅಹ್ಮದಿಯರಾಗುವ ಭಾಗ್ಯ ಗಳಿಸಿದರು.

ಹಝ್ರತ್ ಮಿರ್ಝಾ ಅಯ್ಯೂಬ್ ಬೇಗ್ ಸಾಹೇಬರು ಹೇಳುತ್ತಾರೆ: ರಮ್‌ಝಾನ್ ತಿಂಗಳಲ್ಲಿ ಸೂರ್ಯ ಮತ್ತು ಚಂದ್ರ ಗ್ರಹಣ ಸಂಭವಿಸುವ ಬಗ್ಗೆ **ದಾರುಖುತ್ನಿ** ಮೊದಲಾದ ಹದೀಸು ಗ್ರಂಥಗಳಲ್ಲಿ ಭವಿಷ್ಯವಾಣಿಗಳಿವೆ. 1894 ಮಾರ್ಚ್ ತಿಂಗಳಲ್ಲಿ ಮೊದಲು ಚಂದ್ರ ಗ್ರಹಣ ಸಂಭವಿಸಿತು. ಅದು ರಮ್‌ಝಾನ್ ತಿಂಗಳು ಸಹ ಆಗಿತ್ತು. ಅದೇ ತಿಂಗಳು ಸೂರ್ಯ ಗ್ರಹಣ ಸಂಭವಿಸಲಿರುವ ದಿನ ಸಮೀಪವಾದಾಗ ನಾನು ಮತ್ತು ನನ್ನ ಇಬ್ಬರು ಸಹೋದರರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆ ಖಾದಿಯಾನ್‌ನಲ್ಲಿ ಈ ದೃಷ್ಟಾಂತ ವೀಕ್ಷಿಸಲು ಮತ್ತು **ನಮಾಝೇ ಕುಸೂಫ್** ಅನುಷ್ಠಿಸಲು ಶನಿವಾರ ಸಾಯಂಕಾಲ ಲಾಹೋರಿನಿಂದ ಹೊರಟು ಅಂದಾಜು ರಾತ್ರಿ ಹನ್ನೊಂದು ಗಂಟೆಗೆ ಬಟಾಲ ತಲಪಿದೆವು. ಮುಂದಿನ ದಿನ ಬೆಳಗ್ಗೆ ಸೂರ್ಯಗ್ರಹಣ ಸಂಭವಿಸಲಿತ್ತು. ಆಗ ಬಿರುಗಾಳಿ ಬೀಸುತ್ತಿತ್ತು. ಸಿಡಿಲು ಮಿಂಚು ಬೆಳಗುತ್ತಿತ್ತು. ನಮ್ಮೆದುರಿಗೆ ಗಾಳಿ ಬೀಸುತ್ತಿತ್ತು. ನಮ್ಮ ಕಣ್ಣುಗಳಿಗೆ ಧೂಳು ಮುಸುಕುತ್ತಿತ್ತು. ಬಟಾಲದಿಂದ ಖಾದಿಯಾನಿಗೆ ನಡೆಯುತ್ತಾ ಸಾಗುತ್ತಿದ್ದೆವು. ಚೆನ್ನಾಗಿ ಕಾಲು ಹಾಕಲು ಸಾಧ್ಯವಾಗುತ್ತಿರಲಿಲ್ಲ ಮಿಂಚಿನ ಬೆಳಕು ಮಾತ್ರ ದಾರಿ ದೀಪವಾಗಿತ್ತು. ರಾತ್ರಿ ಹೇಗಾದರೂ ನಡೆದು ಖಾದಿಯಾನ್ ತಲಪಬೇಕೆಂಬ ದೃಢನಿರ್ಧಾರವಿತ್ತು. ಅಹ್ಮದಿಯ್ಯತ್ ಮೊದಲೇ ಸ್ವೀಕರಿಸಿದ್ದೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ **ನಮಾಝೇ ಕುಸೂಫ್** ಅನುಷ್ಠಿಸಲು ನಿರ್ಧರಿಸಿ ಹೊರಟಿದ್ದೆವು. ಮೂವರು ರಸ್ತೆಯಲ್ಲಿ ನಿಂತು ಪ್ರಾರ್ಥಿಸಿದೆವು: ಭೂಮ್ಯಾಕಾಶಗಳ ಒಡೆಯನಾದ ಸರ್ವಶಕ್ತನಾದ ಅಲ್ಲಾಹ್, ನಾವು ನಿನ್ನ ಬಲಹೀನ ದಾಸರಾಗಿದ್ದೇವೆ. ನಿನ್ನ ಮಸೀಹರ ಸಂದರ್ಶನ ಮಾಡಲು ನಡೆಯುತ್ತಾ ಸಾಗುತ್ತಿದ್ದೇವೆ. ಚಳಿ ಇದೆ. ನೀನು ನಮ್ಮ ಮೇಲೆ ದಯೆದೋರು. ನಮಗೆ ಮಾರ್ಗ ಸುಲಭಗೊಳಿಸು. ನಮ್ಮ ವಿರುದ್ಧ ಬೀಸುವ ಗಾಳಿಯನ್ನು ದೂರಸರಿಸು. ಈ ಪ್ರಾರ್ಥನೆ ಮಾಡಿದ ಕೂಡಲೆ ಗಾಳಿಯು ಬೀಸುವ ದಿಕ್ಕು ಬದಲಾವಣೆ ಗೊಂಡಿತು. ನಮ್ಮ ಹಿಂಭಾಗದಿಂದ ಗಾಳಿಬೀಸತೊಡಗಿತು. ಪ್ರಯಾಣ ಸುಲಭವಾಯಿತು.

ಮೌಲವಿ ಗುಲಾಮ್ ರಸೂಲ್ ಸಾಹೇಬರು ಹೇಳುತ್ತಾರೆ: 1894ರಲ್ಲಿ ಸೂರ್ಯ, ಚಂದ್ರ ಗ್ರಹಣಗಳು ಸಂಭವಿಸಿದಾಗ ನಾನು ಲಾಹೋರಿನಲ್ಲಿ ಮೌಲವಿ ಹಾಫಿಝ್ ಅಬ್ದುಲ್ ಮನ್ನಾನ್ ಸಾಹೇಬರಿಂದ ತಿರ್‌ಮಿದೀ. ಶರೀಫ್ ಎಂಬ ಹದೀಸು ಗ್ರಂಥ ಕಲಿಯುತ್ತಿದ್ದೆನು. ಮೌಲವಿಗಳು ಸೂರ್ಯ ಚಂದ್ರ ಗ್ರಹಣಗಳಿಂದ ಗಾಬರಿಗೊಂಡದ್ದನ್ನು ನಾನು ಕಂಡೆನು. ಅವರು ಜನರಿಗೆ ಬಾಲಿಶ ರೂಪದಲ್ಲಿ ಸಮಾಧಾನ ನೀಡುತ್ತಿದ್ದರು. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಬಗ್ಗೆ ನಂಬಿದ್ದೆನು. ನಾನು ಹದೀಸು ಕಲಿಕೆ ಪೂರ್ಣಗೊಳಿಸಲು ಅಮೃತ್‌ಸರಿಗೆ ಹೋದೆನು. ಅಲ್ಲಿ ಎರಡು ಮೂರು ವರ್ಷ ನನ್ನ ವ್ಯಾಸಂಗ ಪೂರ್ಣಗೊಳಿಸಿ ಖಾದಿಯಾನಿಗೆ ಹೋಗಿ ಬೈಅತ್ ಮಾಡುವ ಭಾಗ್ಯ ಗಳಿಸಿದೆನು.

ಭಾಯೀ ಅಬ್ದುರ್ರಹ್ಮಾನ್ ಸಾಹೇಬ್ ಖಾದಿಯಾನಿ ಹೇಳುತ್ತಾರೆ: 1894ರ ರಮ್‌ಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದ ದೃಶ್ಯ ನನ್ನ ಕಣ್ಣುಗಳೆದುರು ಇಂದು ಸಹ ಇದೆ. ನಮ್ಮ ಶಾಲೆಯ ಹೆಡ್‌ಮಾಸ್ಟರ್ ಮೌಲವಿ ಜಮಾಲುದ್ದೀನ್ ಸಾಹೇಬರು ಈ ದೃಷ್ಟಾಂತ ಈಡೇರಿದಾಗ ನಮ್ಮ ಕ್ಲಾಸಿನಲ್ಲಿ ಎಲ್ಲರ ಮುಂದೆ ಹೇಳಿದರು: "ಆಖಿರೀ ಝಮಾನದಲ್ಲಿ ಆಗಮಿಸುವ ಮಹ್‌ದಿಯನ್ನು ಈಗ ಹುಡುಕಬೇಕು. ಅವರು

ನಿಶ್ಚಯವಾಗಿಯೂ ಯಾವುದೋ ಗುಹೆಯಲ್ಲಿ ಹುಟ್ಟಿರುವರು" ಈ ಮಾತುಗಳು ಈಗಲೂ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಾ ಇವೆ.

ನನ್ನ ಮನಸ್ಸಿಗೆ ಹೊಳೆದ ಇನ್ನೊಂದು ವಿಷಯವೇನೆಂದರೆ, ಈ ಸಂಭವ ಮನುಷ್ಯ ಪ್ರಯತ್ನದ ಮೂಲಕ ನಡೆದುದಲ್ಲ. ಅದು ಆಕಾಶದಲ್ಲಿ ಮನುಷ್ಯನ ಹಸ್ತಕ್ಷೇಪ ನಡೆಯದೆ ಸಂಭವಿಸಿತು. ಮೂರನೆಯ ವಿಷಯ ನನಗೆ ತೋಚಿದುದು, ಅವರು ಕುಫ್ರನ್ನು ಅಳಿಸುವರು, ಇಸ್ಲಾಮನ್ನು ಹರಡುವರು. ಇಸ್ಲಾಮೀ ಸೈನ್ಯ ಸಿದ್ಧ ಪಡಿಸಿ ಅವಿಶ್ವಾಸಿಗಳನ್ನು ಕೊಂದು ಮುಸ್ಲಿಮರಿಗೆ ಜಯ ಕೊಡಿಸುವರು. ನಾಲ್ಕನೆಯ ವಿಷಯ ಪ್ರಾರ್ಥನೆಗಳ ಸ್ವೀಕಾರದ ಬಗ್ಗೆಯಾಗಿದೆ. ಮುಸ್ಲಿಮ್ ಸಮುದಾಯದ ಸಂತರು ಮಹ್‌ದಿಯ ಆಗಮನಕ್ಕೋಸ್ಕರ ದುಆ ಮಾಡುತ್ತಿದ್ದರು. ಅವರ ದುಆಗಳನ್ನು ಅಲ್ಲಾಹನು ಸ್ವೀಕರಿಸಿದನು. ಐದನೆಯ ವಿಷಯವೇನೆಂದರೆ, ಇದು ಇಸ್ಲಾಮಿನ ಸತ್ಯತೆಗೆ ಸ್ಪಷ್ಟ ಸಾಕ್ಷ್ಯಾಧಾರವಾಗಿದೆ. ಇಸ್ಲಾಮ್ ಎಂತಹ ಧರ್ಮವೆಂದರೆ, ಅದು ಅಲ್ಲಾಹನಿಗೆ ಪ್ರಿಯಕರವಾಗಿದೆ. ಅದು ಅಲ್ಲಾಹನ ಕಡೆಗೆ ತಲಪುವ ಮಾರ್ಗವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಬ್ಬ ಸಹಾಬಿ ಹಝ್ರತ್ ಶೇಖ್ ನಸೀರುದ್ದೀನ್ ಸಾಹೇಬ್ 1858ರಲ್ಲಿ ಇಸ್ಕಂದರ್‌ಪುರ ಜಾಲಂಧರ್ ಜಿಲ್ಲೆಯಲ್ಲಿ ಜನಿಸಿದರು. ಒಂದು ಸ್ವಪ್ನ ಕಂಡ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದರು. ಅವರು ಅಹ್ಲೇ ಹದೀಸ್ ಪಂಗಡಕ್ಕೆ ಸೇರಿದ್ದರು. ಅವರಿಗೆ ಸಮಾಧಾನವಿರಲಿಲ್ಲ. ಅವರು ಬಹಳ ವಿನಯಾನ್ವಿತನಾಗಿ ಅಳುತ್ತಾ ದುಆ ಮಾಡಿದರು: ಓ ನನ್ನ ದೇವಾ, ನೀನೇ ನನಗೆ ಮಾರ್ಗದರ್ಶನ ನೀಡು. ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಿದನು. ಅವರು ಒಂದು ಸ್ವಪ್ನ ಕಂಡರು. ಬೃಹತ್ತಾದ ವಿಪತ್ತು ಅವರನ್ನು ಆಕ್ರಮಿಸಲು ಬರುತ್ತಾ ಇದೆ. ಅವರು ಬಂದೂಕಿನಿಂದ ಗುಂಡು ಹೊಡೆದಾಗ, ಅದು ಹೊಗೆಯ ಹಾಗೆ ಅಪ್ರತ್ಯಕ್ಷವಾಯಿತು. ಅನಂತರ ಅವರು ಎತ್ತರದ ಸ್ಥಳದಲ್ಲಿ ಸಾಮೂಹಿಕ ನಮಾಝ್ ಅನುಷ್ಠಿಸಿದರು. ಈ ಸ್ವಪ್ನವನ್ನು ಒಬ್ಬ ಮೌಲವಿಗೆ ವಿವರಿಸಿದಾಗ, ಆ ಮೌಲವಿ ಹೇಳಿದರು: ನೀವು ನಿಮ್ಮ ಶೈತಾನನ ಮೇಲೆ ಜಯಗಳಿಸುವಿರಿ. ಸಾತ್ವಿಕರ ಜಮಾಅತಿಗೆ ನೀವು ಸೇರುವಿರಿ.

ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ತಿಳಿದಾಗ, ಖಾದಿಯಾನಿಗೆ ಹೋದರು. ಅಲ್ಲಿ ತನ್ನ ಸ್ವಪ್ನದಲ್ಲಿ ಕಂಡಂತೆ ಜನರನ್ನು ಕಂಡು ಕೂಡಲೆ ಬೈಅತ್ ಮಾಡಿದರು. ಸೂರ್ಯ ಚಂದ್ರ ಗ್ರಹಣ ಮತ್ತು ಮೌಲವಿಯ ಉಪದೇಶ ಅವರಿಗೆ ಮಾರ್ಗದರ್ಶನ ನೀಡಲು ಮುಖ್ಯ ಪಾತ್ರವಹಿಸಿದುವು.

ಅಲ್ಲಾಹನು ಲೋಕದ ಜನರಿಗೆ ಬುದ್ಧಿ ನೀಡಲಿ. ಇಂದಿನ ಕಾಲದ ಮುಸ್ಲಿಮರು ಈ ಕಾಲಘಟ್ಟದ ಇಮಾಮರನ್ನು ವಿರೋಧಿಸುವ ಬದಲು ಅವರನ್ನು ನಂಬುವ ಭಾಗ್ಯಗಳಿಸಲಿ.

ಅನಂತರ ಹುಝೂರ್, ಅಹ್ಮದ್ ಯಹ್‌ಯಾ ಬಾಜ್ವರ ಬಗ್ಗೆ ಪ್ರಸ್ತಾಪಿಸಿದರು. ಅವರು 11-3-2015ರಂದು ಜರ್ಮನಿಯಲ್ಲಿ ಒಂದು ಅಪಘಾತಕ್ಕೆ ತುತ್ತಾಗಿ ಮೃತರಾಗಿದ್ದರು, **ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್**. ಅವರು ಜಾಮಿಅ ಅಹ್ಮದಿಯಾ ಜರ್ಮನಿಯ ವಿದ್ಯಾರ್ಥಿ ಆಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತ್ ನೀಡಲಿ–ಆಮೀನ್.

----------------*****---------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 20-03-2015.*

Summarized by *Nazarath Nashr-o-Isha'at,Qadian*

***Kannada Translation:*** M. Ubeidullah for Kannada Desk, Qadian

***Reviewed by:*** Muhammad Yusuf | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*